7. ಪ್ರಕಟಣೆ

ವಿಷಯ: ಮಾನ್ಯ ಸದಸ್ಯರುಗಳಿಗೆ ಸಾವಯವ ಕೃಷಿ ಪದ್ಧತಿ ಕುರಿತು

ಅಧ್ಯಕ್ಷರು: ಉಳಿದ ಚರ್ಚೆಯನ್ನು ನಾಳೆ ಮುಂದುವರೆಸೋಣ. ಶ್ರೀ ಸುಭಾಷ್ ಪಾಳೇಕರ್‌ರವರದು ನೈಸರ್ಗಿಕ ಕೃಷಿ ಬಗ್ಗೆ ಮೊನ್ನೆ ಏನು ಕಾರ್ಯಾಗಾರ ಪ್ರಾರಂಭ ಮಾಡಿದ್ದಾರೆ, ಅದು ಇವತ್ತು ಸಾಯಂಕಾಲ ಆರು ಗಂಟೆಗೆ ಮತ್ತು ನಾಳೆ ಸಾಯಂಕಾಲ ಆರು ಗಂಟೆಗೆ ಎರಡು ದಿವಸಗಳ ಕಾಲ ಮಾತ್ರ ನಡೆಯುತ್ತಿದೆ. ನೈಸರ್ಗಿಕ ಕೃಷಿ ಬಗ್ಗೆ ಬಹಳ ಉತ್ತಮವಾದ ವಿಚಾರಗಳನ್ನು ಅವರು ಹೇಳುತ್ತಾರೆ. ಶಾಸಕರು ಅದರ ಸದುಪಯೋಗ ಪಡೆದುಕೊಳ್ಳಬೇಕೆಂದು ನನ್ನ ವಿನಂತಿ. ಮೊನ್ನೆಯೂ ಸಹ ಸದಸ್ಯರ ಸಂಖ್ಯೆ ಬಹಳ ಕಡಿಮೆ ಇತ್ತು. ಈ ದಿನದ ಕಾರ್ಯಾಗಾರದಲ್ಲಿ ದಯವಿಟ್ಟು ಎಲ್ಲರೂ ಭಾಗವಹಿಸಿ ರೈತರ ಬಗ್ಗೆ ನಾವು ಏನು ಚರ್ಚೆ ಮಾಡುತ್ತಿದ್ದೇವೆ ಈ ಹಿನ್ನೆಲೆಯಲ್ಲಿ ನೈಸರ್ಗಿಕ ಕೃಷಿ ಬಗ್ಗೆ ನಾವು ತಿಳಿದುಕೊಳ್ಳುವುದು ಬಹಳ ಅವಶ್ಯಕವಿದೆ. ದಯವಿಟ್ಟು ಎಲ್ಲರೂ ಭಾಗವಹಿಸಬೇಕೆಂದು ವಿನಂತಿ ಮಾಡಿಕೊಂಡು ಉಳಿದ ಚರ್ಚೆಯನ್ನು ನಾಳೆ ಮುಂದುವರೆಸುತ್ತಿದ್ದೇನೆ. ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಸಂಜೆ 5-25 ಗಂಟೆಗೆ ಮುಂದೂಡಲಾಗಿ, ಪುನ: 24-07-2008 ರಂದು ಬೆಳಿಗ್ಗೆ 11-00 ಗಂಟೆಗೆ ಸೆರಲು ನಿಶ್ಚಯಿಸಲಾಯಿತು)

38 (44) ಶ್ರೀ ಬಾಲಕೃಷ್ಣ ಹೆಚ್.ಪಿ. (ಮಾಗಡಿ) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಮಾಗಡಿ ತಾಲ್ಲೂಕು ಹಾಗೂ ರಾಮನಗರ ತಾಲ್ಲೂಕಿನಲ್ಲಿರು ಪ್ರೌಢಶಾಲೆಗಳ ಸಂಖ್ಯೆ ಎಷ್ಟು ;

(ಆ) ಇದರಲ್ಲಿ ಉರ್ದು ಶಾಲೆಗಳ (ಪ್ರೌಢ) ಸಂಖ್ಯೆ ಎಷ್ಟು ವಿವರ ಒದಗಿಸುವುದು;

(ಇ) ಈ ಪ್ರಾಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಶಿಕ್ಷಕರ ಕೊರತೆ ಇರುವ ಶಾಲೆಗಳ ವಿವರ ಒದಗಿಸುವುದು ;

(ಉ) ಈ ಖಾಲಿ ಹುದ್ದೆಗಳನ್ನು ಎಷ್ಟು ದಿನದಲ್ಲಿ ಭರ್ತಿ ಮಾಡಲಿದೆ ಹಾಗೂ ವಿದ್ಯಾರ್ಥಿಗಳ ಸುಗಮ ವಿದ್ಯಾಭ್ಯಾಸಕ್ಕೆ ಅವಕಾಶ ಕಲ್ಪಿಸಿ ಕೊಡಲಾಗುವುದೇ?